ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 21/1/21

## ರೈತರ ಎದುರು ಹೊಸ ಪ್ರಸ್ತಾಪ ಮುಂದಿಟ್ಟ ಕೇಂದ್ರ ಸರ್ಕಾರ


# ಹೊಸ ಕೃಷಿ ಕಾಯ್ದೆ ಅಮಾನತು

■ ವಿಜಯವಾಣಿ ಸುದ್ದಿಜಾಲ ನವದೆಹಲಿ 21-1-2021

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಸುಧಾರಣಾ ಕಾನೂನುಗಳನ್ನು ವಿರೋಧಿಸಿ ರೈತ ಸಂಘಟನೆಗಳು ಕಳೆದ ಎರಡು ತಿಂಗಳಿಂದ ದೆಹಲಿ ಗಡಿ ಭಾಗಗಳಲ್ಲಿ ನಡೆಸುತ್ತಿರುವ ಪ್ರತಿಭಟನೆ ಅಂತ್ಯಗೊಳ್ಳುವ ಲಕ್ಷಣ ಗೋಚರಿಸುತ್ತಿದೆ. ರೈತ ಮುಖಂಡರೊಂದಿಗೆ ಕೇಂದ್ರ ಸಚಿವರು ನಡೆಸಿದ 10ನೇ ಸುತ್ತಿನ ಮಾತುಕತೆ ಬಳಿಕ ಇಂಥದ್ದೊಂದು ಭರವಸೆ ಮೂಡಿದೆ. ಮೂರು ಕೃಷಿ ಕಾನೂನುಗಳನ್ನು ಒಂದೂವರೆ ವರ್ಷದಿಂದ ಎರಡು ವರ್ಷಗಳ ತನಕ ಅಮಾನತಿನಲ್ಲಿಡಲು ಸಿದ್ಧ ಎಂಬ ಹೊಸ ಪ್ರಸ್ತಾವವನ್ನು ಕೇಂದ್ರ ಸರ್ಕಾರ ರೈತ ಮುಖಂಡರ ಮುಂದಿಟ್ಟಿದೆ. ಇದಕ್ಕೆ ರೈತ ಮುಖಂಡರು ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಮುಂದಿನ ಸಭೆಯಲ್ಲಿ ಅವರು ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ. ಎಲ್ಲ ಸಂಘಟನೆಗಳ ಮುಖಂಡರನ್ನು ಸೇರಿಸಿ ಆಂತರಿಕವಾಗಿ ಚರ್ಚಿಸಿ ಸೂಕ್ತ ತೀರ್ಮಾನವೊಂದನ್ನು ತೆಗೆದುಕೊಳ್ಳಲಾಗುವುದು ಎಂದು ಸಭೆಯಲ್ಲಿದ್ದ ರೈತ ಮುಖಂಡರು, ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮತ್ತು ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್‌ಗೆ ತಿಳಿಸಿದ್ದಾರೆ. ಕೆಲ ರೈತ ಮುಖಂಡರು ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ತಿರಸ್ಕರಿಸಿ, ಕಾನೂನನ್ನು ಹಿಂಪಡೆದುಕೊಳ್ಳಬೇಕು ಎಂದು ಕೇಂದ್ರಕ್ಕೆ ಆಗ್ರಹಿಸಿದ್ದಾರೆ. ಮತ್ತೆ ಕೆಲ ರೈತ ನಾಯಕರು ಸಕಾರಾತ್ಮಕ ಅಭಿಪ್ರಾಯ ಹೊರಹಾಕಿದ್ದು, ಮುಂದಿನ ಸಭೆಯಲ್ಲಿ ಪ್ರತಿಕ್ರಿಯೆ ಕೊಡುವುದಾಗಿ ಹೇಳಿದ್ದಾರೆ. 11ನೇ ಸುತ್ತಿನ ಸಭೆಯನ್ನು ಜ. 22ಕ್ಕೆ ನಿಗದಿಪಡಿಸಲಾಗಿದೆ. ಕಾನೂನನ್ನು ಅಮಾನತಿನಲ್ಲಿಡುವ ನಮ್ಮ ಪ್ರಸ್ತಾವವನ್ನು ರೈತ ಮುಖಂಡರು ಗಂಭೀರವಾಗಿ ಪರಿಗಣಿಸಿರುವುದು ಖುಷಿ ತಂದಿದೆ. ಜ.22ರಂದು ಅವರು ತೀರ್ಮಾನ ತಿಳಿಸಲಿದ್ದಾರೆ ಎಂದು ಸಚಿವ ನರೇಂದ್ರ ಸಿಂಗ್ ತೋಮರ್ ಸಭೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

» ಮುಂದಿನ ಮಾತುಕತೆಯಲ್ಲಿ ಅಂತಿಮ ತೀರ್ಮಾನ ಸಾಧ್ಯತೆ

➊ ಪುಟ 3



ಜ.26ರ ಗಣರಾಜ್ಯೋತ್ಸವಕ್ಕೆ ದೆಹಲಿಯ ಹೊರವಲಯದಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ತಾಲೀಮು ನಡೆಸಿದ ರೈತ ಪ್ರತಿಭಟನಾ ನಿರತರು.

## ಸಮಿತಿ ಕುರಿತ ಟೀಕೆಗೆ ಸುಪ್ರೀಂ ಗರಂ

ಸುಪ್ರೀಂಕೋರ್ಟ್ ರಚಿಸಿರುವ ಸಮಿತಿಯ ಪುನರ್ ರಚನೆಗೆ ಒತ್ತಾಯಿಸಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ನೇತೃತ್ವದ ತ್ರಿಸದಸ್ಯ ಪೀಠ, ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಕಾನೂನುಗಳ ಮೇಲೆ ತೀರ್ಮಾನಿಸುವ ಅಧಿಕಾರ ಸಮಿತಿಗಿದೆ ಎಂದವರಾರು? ಎಲ್ಲರ ಅಭಿಪ್ರಾಯ ಸಂಗ್ರಹಿಸಿ ನಮಗೆ ವರದಿ ನೀಡಿ ಎಂದಷ್ಟೇ ನಾವು ಸಮಿತಿಗೆ ತಿಳಿಸಿದ್ದೇವೆ. ಹೀಗಾಗಿ ಪಕ್ಷಪಾತದ ಮಾತೆಲ್ಲಿ ಬಂತು? ವ್ಯಕ್ತಿಗಳ ಬಗ್ಗೆ ಅವಹೇಳನಕಾರಿ ಮಾತನಾಡುವುದು ಸರಿಯಲ್ಲ. ಸಮಿತಿಯಲ್ಲಿರುವ ತಜ್ಞರು ಕೃಷಿ ಕ್ಷೇತ್ರದ ಬಗ್ಗೆ ಅಸಾಧಾರಣ ಜ್ಞಾನ ಹೊಂದಿದ್ದಾರೆ ಎಂದು ತನ್ನ ತೀರ್ಮಾನ ಸಮರ್ಥಿಸಿಕೊಂಡಿತು.

ಕನಿಷ್ಠ ಬೆಂಬಲ ಬೆಲೆ ಮತ್ತು ಕಾನೂನಿನ ಚರ್ಚಿಸಲು ಜಂಟಿ ಸಮಿತಿ ರಚನೆ ಮಾ ಅದು ನೀಡುವ ಶಿಫಾರಸನ್ನು ಅನುಷ್ಠಾನಗೊಳಿಸುವ ಕೇಂದ್ರ ಹೇಳಿದೆ. ನಾವು ನಾಳೆ ಸಭೆ ನಡೆಸಿ, ಈ ಪ್ರಸ್ತಾ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಲಿದ್ದೇವೆ.

। ಹನ್ನನ್ ವೆ
ಆಲ್ ಇಂಡಿಯಾ ಕಿಸಾನ್ ಸಭಾದ ಪ್ರಧಾನ ಕಾಯ



ರೈತರೊಂದಿಗಿನ ಮಾತುಕ ಸರಿ ಹಾದಿಯಲ್ಲಿ ಸಾಗುತ್ತಿ ಜ. 22ರಂದು ಬಿಕ್ಕಟ್ಟು ಶಮನಗೊಳ್ಳುವ ಸಾಧ್ಯತೆ

। ನರೇಂದ್ರ
ತೋ
ಕೇಂದ್ರ ಕೃಷಿ

## ರೈತರ ಮೇಲಿನ ಪ್ರಕರಣಕ್ಕೆ ಆಕ್ಷೇ

ದೆಹಲಿ ಗಡಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ವಿನಾಕಾರಣ ಕೇಸುಗಳನ್ನು ದಾಖಲಿಸಲಾಗುತ್ತಿದೆ. ಕೆಲವರಿಗೆ ರಾಷ್ಟ್ರೀಯ ತನಿಖಾ ಏಜೆನ್ಸಿಯಿಂದ ನೋಟಿ ಜಾರಿಗೊಳಿಸಲಾಗಿದೆ. ಈ ರೀತಿ ಕ್ರಿಮಿನಲ್ ಕೇಸುಗಳ ದಾಖಲಿಸಿ ರೈತರನ್ನು ಶೋಷಿಸುವುದು ಸರಿಯಲ್ಲ. ಇ ಮುಂದುವರಿದಲ್ಲಿ ನಾವು ಸುಮ್ಮನಿರುವುದಿಲ್ಲ ಎಂದು ಮುಖಂಡರು ಸಭೆಯಲ್ಲಿ ಕೇಂದ್ರಕ್ಕೆ ಎಚ್ಚರಿಕೆ ನೀಡಿದ್ದಾ ರೈತರ ಅಸಮಾಧಾನಕ್ಕೆ ಪ್ರತಿಕ್ರಿಯಿಸಿದ ಸಚಿವರು, ಇ ಪರಿಶೀಲಿಸುವುದಾಗಿ ಭರವಸೆ ನೀಡಿದ್ದಾರೆ.

# ಹೊಸ ಕೃಷಿ ಕಾಯ್ದೆ ಅಮಾನತು?

ಮೊದಲನೇ ಪುಟದಿಂದ... ವಿ.ವಾ. 21-1-2021

ಕಾನೂನನ್ನು ಅಮಾನತಿನಲ್ಲಿಡುವ ಉದ್ದೇಶದ ಬಗ್ಗೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟಿಗೂ ಅಫಿಡವಿಟ್ ಸಲ್ಲಿಸುವ ಚಿಂತನೆ ನಡೆಸಿದೆ ಎಂದು ಉನ್ನತ ಮೂಲಗಳಿಂದ ತಿಳಿದುಬಂದಿದೆ.

**ಕಾನೂನು ಸುವ್ಯವಸ್ಥೆ ಪೊಲೀಸರಿಗೆ ಬಿಟ್ಟಿದ್ದು :** ಜ.26ರಂದು ನಡೆಸಲು ಉದ್ದೇಶಿಸಲಾಗಿರುವ ಟ್ರಾಕ್ಟರ್ ರ್‍ಯಾಲಿಗೆ ತಡೆ ನೀಡುವುದು ನಮ್ಮ ಕೆಲಸವಲ್ಲ ಎಂದು ಸುಪ್ರೀಂಕೋರ್ಟ್ ಪುನರುಚ್ಚರಿಸಿದೆ. ದೆಹಲಿ ಪ್ರವೇಶಿಸಲು ಯಾರಿಗೆ ಅನುಮತಿ ನೀಡಬೇಕು, ನೀಡಬಾರದು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ದೆಹಲಿ ಪೊಲೀಸರದ್ದು. ಇದರಲ್ಲಿ ಕೋರ್ಟ್ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

---

**ಒಂದೂವರೆ ವರ್ಷದ ಮಟ್ಟಿಗೆ ಕಾನೂನನ್ನು ಅಮಾನತ್ತಿನಲ್ಲಿಡುವ ಪ್ರಸ್ತಾವ ನಮ್ಮ ಮುಂದಿದೆ. ನಾವಿದನ್ನು ತಿರಸ್ಕರಿಸಿದ್ದರೂ, ಕೇಂದ್ರ ಸರ್ಕಾರದಿಂದ ಇಂಥದ್ದೊಂದು ಪ್ರಸ್ತಾವ ಬಂದಿರುವುದರಿಂದ ನಾಳೆ ರೈತ ಮುಖಂಡರೊಂದಿಗೆ ಸಭೆ ಏರ್ಪಡಿಸಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.**

| ಜೋಗಿಂದರ್ ಸಿಂಗ್ ಉಗ್ರಹನ್
ಭಾರತೀಯ ಕಿಸಾನ್ ಯೂನಿಯನ್ ಅಧ್ಯಕ್ಷರು